**ಓ.ಎಸ್. ನಂ. 68/2020** **ಪಿ.ಡಬ್ಲ್ಯೂ- 2**

**ಸಾಕ್ಷಿಯನ್ನು ದಿನಾಂಕ 28.2.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಆರ್.ಡಿ.ಕೆ ವಕೀಲರಿಂದಃ

ನಾನು ಹೆಚ್.ಡಿ.ಕೋಟೆಯ ಟೌನ್ ಪಕ್ಕದಲ್ಲಿ ವ್ಯವಸಾಯ ಮಾಡುತ್ತೇನೆ. ನನಗೆ ಸಂಬಂಧಪಟ್ಟಂತೆ ತೆಂಗಿನ ತೋಟ ಇರುತ್ತದೆ ಹಾಗೂ ಕಬ್ಬು ಬೆಳೆಯನ್ನು ಬೆಳೆಯುತ್ತೇನೆ. ನನಗೆ ಸಂಬಂಧಪಟ್ಟ ಜಮೀನು ನೀರಾವರಿ ಜಮೀನು ಆಗಿರುತ್ತದೆ. ನಾನು ವರ್ಷಕ್ಕೆ ಒಮ್ಮೆ ಕಬ್ಬು ಬೆಳೆಯನ್ನು ಹಾಗೂ ಜೋಳವನ್ನು 3-4 ಬಾರಿ ಬೆಳೆಯುತ್ತೇನೆ. ವಾದಿಯು ನನಗೆ ಸೋದರ ಮಾವನ ಮಗನಾಗಬೇಕು. ಅವರು ಮೈಸೂರಿನಲ್ಲಿ ವಾಸವಾಗಿರುತ್ತಾರೆ. ಅವರು ವ್ಯಾಪಾರಸ್ಥರು. ಅವರು ಕಂಟ್ರಾಕ್ಟ ಕೆಲಸ ಮಾಡಿಸುತ್ತಿದ್ದರು. ಈಗ ಏನು ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಹೇಳಿರುವ ವ್ಯವಹಾರವು ಯಾವ ವಾರ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳು ಕ್ರಯದ ಕರಾರುಪತ್ರವನ್ನು ಮಾಡುವ ಬಗ್ಗೆ ನನ್ನನ್ನು ಹೆಚ್.ಡಿ.ಕೋಟೆಗೆ ಕರೆಸಿರುತ್ತಾರೆ. ಸದರಿ ಸಮಯದಲ್ಲಿ ನಾನು ಹೆಚ್.ಡಿ.ಕೋಟೆಯಲ್ಲೆ ಇದ್ದೆ. ಕರಾರುಪತ್ರವಾದ ಸಮಯದಲ್ಲಿ ನನ್ನ ಜೊತೆ ವಾದಿ, ಪ್ರತಿವಾದಿಯರು, ವಕೀಲರಾದ ದಿನೇಶ್ ಹಾಗೂ ಇನ್ನೊಬ್ಬ ಸಾಕ್ಷಿದಾರರಾದ ಸದಾಶಿವಪ್ಪ ರವರು ಇದ್ದರು. ನಾನು ಸಾಕ್ಷಿಯಾಗಿ ಸಹಿ ಹಾಕಿದಾಗ ಮಧ್ಯಾಹ್ನ 3 ಗಂಟೆಯಾಗಿತ್ತು. ಸದರಿ ಸಮಯದಲ್ಲಿ ತನ್ವೀರ್ ಶೇಟ್, ಈ ಕೇಸಿನ ವಾದಿ ಮತ್ತು ಪ್ರತಿವಾದಿಯರು ಇದ್ದರು. ನಾನು ಕ್ರಯದ ಕರಾರುಪತ್ರದ ಒಕ್ಕಣೆಯನ್ನು ಓದಿ ತಿಳಿದುಕೊಂಡಿರುತ್ತೇನೆ. ಅದರಲ್ಲಿ 1 ಎಕರೆಗೆ 2.60 ಲಕ್ಷದಂತೆ ಸರ್ವೆ ನಂ.18/2 ರಲ್ಲಿ 4-34 ಎಕರೆ ಜಮೀನನ್ನು ವಾದಿಗೆ ಮಾರಾಟ ಮಾಡುವ ಬಗ್ಗೆ ನಮೂದಿಸಲಾಗಿರುತ್ತದೆ. ಸದರಿ ಸಮಯದಲ್ಲಿ ಜಮೀನಿಗೆ ಸಂಬಂಧಪಟ್ಟ ದಾಖಲಾತಿಯನ್ನು ನಾನು ನೋಡಿರುತ್ತೇನೆ. 6 ತಿಂಗಳ ಅವಧಿಯೊಳಗೆ ಕ್ರಯಪತ್ರ ಮಾಡಿಕೊಡಬೇಕೆಂದು ನಮೂದಾಗಿರುತ್ತದೆ. ಚಿಕ್ಕೆರೆಯೂರು ಗ್ರಾಮವು ನಮ್ಮ ಊರಿನ ಪಕ್ಕದಲ್ಲಿರುತ್ತದೆ. ಪ್ರತಿವಾದಿಯರು ನನ್ನ ಸಂಬಂಧಿಕರಾದ್ದರಿಂದ ದಾವಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಕಾನೂನು ತೊಡಕಿದ್ದ ಬಗ್ಗೆ ನನಗೆ ಗೊತ್ತಿರಲಿಲ್ಲ. ಕಾನೂನು ತೊಡಕಿದ್ದ ಬಗ್ಗೆ ವಾದಿಯು ನನಗೆ ಹೇಳಿರುವುದಿಲ್ಲ. ನನಗೆ ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿರುವುದಿಲ್ಲ. ವಾದಿಯು ಸಾಕ್ಷಿ ಹೇಳಲು ಕೇಳಿದ್ದರಿಂದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಕರಾರುಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದರಿಂದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವರು. ಸದರಿ ದಿನ ಎರಡು ಕ್ರಯದ ಕರಾರುಪತ್ರಗಳನ್ನು ತಯಾರಿಸಲಾಗಿರುತ್ತದೆ. ಸದರಿ ಕ್ರಯದ ಕರಾರುಪತ್ರಗಳನ್ನು ಓದಿ ನಂತರ ನಾನು ಸಹಿ ಮಾಡಿರುತ್ತೇನೆ.

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ1 ರ 5 ಮತ್ತು 6 ನೇ ಖಂಡಿಕೆಯಲ್ಲಿ ಹೇಳಿದಂತೆ ಕ್ರಯಪತ್ರವನ್ನು 6 ತಿಂಗಳ ಒಳಗೆ ಮಾಡಿಕೊಡಬೇಕೆಂಬ ಷರತ್ತು ಇದ್ದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ1 ರಲ್ಲಿ ನಮೂದಿಸಿರುವಂತೆ ಯಾವ ಕಾನೂನು ತೊಡಕು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಎಲ್ಲಾ ದಾಖಲಾತಿಗಳನ್ನು ತಂದುಕೊಟ್ಟು ಕ್ರಯಪತ್ರ ಮಾಡಿಕೊಡಬೇಕೆಂದು ನಮೂದಾಗಿರುತ್ತದೆ ಎನ್ನುವರು. ನಿಪಿ1 ರಲ್ಲಿ 6 ತಿಂಗಳ ಒಳಗೆ ಸಂಬಂಧಪಟ್ಟ ಇಲಾಖೆಯಿಂದ ಅನುಮತಿ ಪಡೆದು ಕ್ರಯಪತ್ರ ಮಾಡಿಕೊಡಬೇಕೆಂಬ ವಿಚಾರ ನನಗೆ ಗೊತ್ತಿರುತ್ತದೆ. ನಾನು ವಾದಿ ಮತ್ತು ಪ್ರತಿವಾದಿಯ ಸಂಬಂಧಿಕನಾಗಿರುವುದರಿಂದ 6 ತಿಂಗಳ ಒಳಗೆ ಕ್ರಯಪತ್ರವಾಗಿರುವ ವಿಚಾರ ಗೊತ್ತಿರುತ್ತದಾ ಎಂದರೆ ಸಾಕ್ಷಿದಾರರು ಕ್ರಯಪತ್ರ ಮಾಡಿಕೊಟ್ಟಿರುವುದಿಲ್ಲ ಎನ್ನುವರು. ಸದರಿ ದಿನ ಆಸ್ತಿಗೆ ಸಂಬಂಧಪಟ್ಟ ಮೂಲ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಂತರ ಸಾಕ್ಷಿದಾರರು ಮುಂದುವರಿದು ನಿಪಿ1 ದಾಖಲೆಯಾದ ದಿನ ಯಾವುದೇ ದಾಖಲಾತಿ ನೋಡಿರುವುದಿಲ್ಲ, ಹಿಂದೆ ಪ್ರತಿವಾದಿಯು ದಾವಆಸ್ತಿಯನ್ನು ಖರೀದಿ ಮಾಡಿದ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿದ್ದು ಸದರಿ ಕ್ರಯಪತ್ರವನ್ನು ನೋಡಿರುತ್ತೇನೆ. ನಾನು ಸದರಿ ದಿನ ಯಾವುದೇ ಮೂಲ ದಾಖಲೆಗಳನ್ನು ನೋಡದೇ ನಿಪಿ1 ಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ಮೂಲ ದಾಖಲೆಯನ್ನು ನೋಡಿರುವುದಿಲ್ಲ, ಆದರೆ ನಿಪಿ1 ಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎನ್ನುವರು. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದು ವಾದಿಯು ನನಗೆ ರಕ್ತ ಸಂಬಂಧಿಕನಾಗಿರುವುದರಿಂದ ಅವರಿಗೆ ಸಹಾಯ ಮಾಡಲುನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ದಾಖಲೆಗಳನ್ನು ನಿಪಿ1 ದಾಖಲೆಯಾದ ದಿನವೇ ಪ್ರತಿವಾದಿಯರು ವಾದಿಗೆ ನೀಡಿದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯು ರಾಜು ಕ್ಷತ್ರೀಯ ಟ್ರಸ್ಟಿನ ಅಧ್ಯಕ್ಷರಾಗಿರುತ್ತಾರೆ ಮತ್ತು ನಾನು ಉಪಾಧ್ಯಕ್ಷನಾಗಿರುತ್ತೇನೆ ಎಂದರೆ ಸಾಕ್ಷಿದಾರರು ಹಿಂದೆ ನಾನು ಉಪಾಧ್ಯಕ್ಷನಾಗಿದ್ದೆ, 1 ನೇ ಪ್ರತಿವಾದಿಯು ಈಗ ಅಧ್ಯಕ್ಷರಾಗಿರುತ್ತಾರೆ ಎನ್ನುವರು. ವಾದಿಯು ಸಹ ಸದರಿ ಟ್ರಸ್ಟಿನ ಅಧ್ಯಕ್ಷರಾಗಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಸಹಾಯಕ ಕಾರ್ಯದರ್ಶಿಯಾಗಿದ್ದೆ. ವಾದಿಯು ಸದರಿ ಟ್ರಸ್ಟಿನ ಅಧ್ಯಕ್ಷರಾಗಿದ್ದಾಗ ನಾನು ಸಹಾಯಕ ಕಾರ್ಯದರ್ಶಿಯಾಗಿದ್ದು ಸದರಿ ಸಮಯದಲ್ಲಿ 1 ಕೋಟಿ ಹಣದ ದುರುಪಯೋಗವಾಗಿದ್ದು ಆ ಬಗ್ಗೆ 1 ನೇ ಪ್ರತಿವಾದಿಯು ನನ್ನ ಮತ್ತು ವಾದಿಯ ವಿರುದ್ಧ ದೂರು ನೀಡಿದ್ದರಿಂದ, ಪ್ರತಿವಾದಿಯರ ವಿರುದ್ಧ ಈ ದಾವೆಯಲ್ಲಿ ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ಸದರಿ ಸಮಯದಲ್ಲಿ 1 ನೇ ಪ್ರತಿವಾದಿಯು ಸಹ ಖಜಾಂಚಿಯಾಗಿದ್ದರು

ಎನ್ನುವರು.  ನನಗೆ ಈ ದಾವೆಯಲ್ಲಿ ಹೇಳಿರುವ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, 1 ನೇ ಪ್ರತಿವಾದಿಯ ವಿರುದ್ಧ ಇರುವ ದ್ವೇಷದ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಪಿ1 ಕರಾರನ್ನು ರದ್ದುಗೊಳಿಸಿ ಹಣವನ್ನು ವಾಪಸ್ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.